ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **1413/2017**

ಚಾಸಾಃ 4
ಫ್ರಾಸಾಃ 3

ದಿನಾಂಕಃ **19-09-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ರುದ್ರೇಶ್ ಎ.ಎಸ್ |
| ತಂದೆಯ/ಗಂಡನ ಹೆಸರು | : | ಸಿದ್ಧರಾಮಯ್ಯ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಹೆಚ್.ಸಿ |
| ವಾಸ ಸ್ಥಳ | : | ನಗರ ಪೊಲೀಸ್ ಠಾಣೆ, ತಿಪಟೂರು |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ನಾನು **2014** ರಿಂದ **2021** ರ ವರೆಗೆ ತಿಪಟೂರು ಗ್ರಾಮಾಂತರ ಸಿಪಿಐ ಕಛೇರಿಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **12-05-2017** ರಂದು ಮಧ್ಯಾಹ್ನ ನನ್ನನ್ನು ಮತ್ತು ನಮ್ಮ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಪರಾಧ ಗಸ್ತು ವಿಭಾಗದ ಸಿಪಿಸಿ **1011** ಮಧುಸೂಧನ್ ಮತ್ತು ಸಿಪಿನಿ **491** ಶಾಂತಕುಮಾರ್ ರವರನ್ನು ವೃತ್ತ ವ್ಯಾಪ್ತಿಯ ಠಾಣಾ ಸರಹದ್ದಿನಲ್ಲಿ ಗಸ್ತು ಕರ್ತವ್ಯದಲ್ಲಿ ಇನ್ಸ ಪೆಕ್ಟರ್ ರವರು ತಮ್ಮ ಜೀಪಿನಲ್ಲಿ ಕರೆದುಕೊಂಡು ಹೋಗಿ ಆ ದಿನ ಕೆ.ಬಿ ಕ್ರಾಸ್ ವ್ಯಾಪ್ತಿಯಲ್ಲಿ ಅರಳಗುಪ್ಪೆಯಲ್ಲಿ ಗಸ್ತು ಮಾಡುತ್ತಿರುವಾಗ ಪೊಲೀಸ್ ರವರಿಗೆ ಬಂದ ಮಾಹಿತಿ ಮೇರೆಗೆ ಶೆಟ್ಟಿಹಳ್ಳಿ ಶಿವಣ್ಣ ರವರು ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿ ಯಾವುದೇ ರಹದಾರಿ ಇಲ್ಲದೆ ಸಾರ್ವಜನಿಕರಿಗೆ ಮಾರಾಟ ಮಾಡುತ್ತಾರೆ ಎಂದು ಬಂದ ಮಾಹಿತಿ ಮೇರೆಗೆ ನಾವು ಸ್ಥಳಕ್ಕೆ **6-45** ಗಂಟೆ ಸಮಯಕ್ಕೆ ಹೋಗಿ ಇನ್ಸ್ ಪೆಕ್ಟರ್ ರವರು ಪಂಚ ಸಾಕ್ಷಿಗಳಿಗೆ ಫೋನು ಮಾಡಿ ಸ್ಥಳಕ್ಕೆ ಬರಬೇಕೆಂದು ಕರೆಸಿರುತ್ತಾರೆ ಅದರ ಮೇರೆಗೆ ಚಾಸಾ-**2** ಮತ್ತು **3** ರವರು ಸ್ಥಳಕ್ಕೆ ಬಂದಿರುತ್ತಾರೆ ಅವರು ಬಂದ ಮೇರೆಗೆ ಆ ವೇಳೆಯಲ್ಲಿ ಆರೋಪಿಯವರು ಮದ್ಯದ ಪ್ಯಾಕೇಟ್ ಗಳನ್ನು ಸ್ವಲ್ಪ ಜನರಿಗೆ ಮಾರಾಟ ಮಾಡುವುದನ್ನು ಕಂಡು ಬಂದಿದ್ದು ಅಲ್ಲಿರುವ ಮದ್ಯದ ವ್ಯಾಸನಿಗಳು ನಮ್ಮ ಪೊಲೀಸ್ ಜೀಪನ್ನು ಕಂಡು ಓಡಿ ಹೋದರು ಸಬ್ ಇನ್ಸ್ ಪೆಕ್ಟರ್ ಮತ್ತು ನಾವು ಪಂಚರ ಸಮಕ್ಷಮ ಪೆಟ್ಟಿಗೆಯನ್ನು

ಪರಿಶೀಲಿಸಿ ಗಲ್ಲಪೆಟ್ಟಿಗೆಯ ಪಕ್ಕ ಒಂದು ರಟ್ಟಿನ ಬಾಕ್ಸ್ ಮತ್ತು ಹಣ ಇದ್ದು ಅದರಲ್ಲಿ **28** ಹೈವಾರ್ಡ ಟೆಟ್ರಾ ಪ್ಯಾಕೇಟ್ **90** ಎಂಎಲ್‌ನ ಟೆಟ್ರಾ ಪ್ಯಾಕೇಟ್ಸ ಗಳನ್ನು ಹಾಗೂ **1450** ರೂ. ಹಣ ಇತ್ತು ಮತ್ತು ಆರೋಪಿಗೆ ರಹದಾರಿ ಇಲ್ಲದೆ ಸದರಿ ಮಧ್ಯಗಳನ್ನು ಮಾರಾಟ ಮಾಡುವುದು ತಪ್ಪು ಎಂದು ತಿಳಿಸಿ **28** ಹೈವಾರ್ಡ ಪೈಕಿ ಟೆಟ್ರಾ ಪ್ಯಾಕೇಟ್ ಗಳ ಪೈಕಿ ಒಂದನ್ನು ರಾಸಾಯನಿಕ ಪರೀಕ್ಷೆಗೆ ಬಿಳಿ ಚೀಲದಲ್ಲಿ ಹಾಕಿ ಅದರ ಬಾಯನ್ನು ಕಟ್ಟಿ ಆರ್ ಎಂಬ ಅಕ್ಷರದಿಂದ ಸೀಲು ಮಾಡಿ ಮತ್ತು ಪಂಚ ಸಾಕ್ಷಿಗಳ ಸಹಿಯನ್ನು ಪಡೆದುಕೊಂಡು ಅದರ ಮೇರೆಗೆ ಅಂಟಿಸಿರುತ್ತೇವೆ. ನಿಪಿ-**1** ರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ**1**(ಸಿ) ಎಂದು ಗುರುತಿಸಲಾಗಿದೆ. ನಿಪಿ-**1** ನ್ನು ಘಟನೆಯ ಸ್ಥಳದಲ್ಲಿ ರಾತ್ರಿ **7** ರಿಂದ **7-45** ಗಂಟೆವರೆಗೂ ಬರೆದಿರುತ್ತಾರೆ. ಈ ವಿಚಾರವಾಗಿ ತನಿಖಾಧಿಕಾರಿಗೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಎಂಓ-**1** ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು- ಶ್ರೀ ಬಿ ಎಂ ವಕೀಲರಿಂದಃ

ನಮ್ಮ ಠಾಣೆಯ ದಿನಚರಿಯಲ್ಲಿ ಸಿಪಿಐ ರವರ ಜೊತೆ ಗಸ್ತಿಗೆ ಹೋಗಿರುವ ಬಗ್ಗೆ ಯಾವ ಯಾವ ಸ್ಥಳದಲ್ಲಿ ಗಸ್ತು ಮಾಡಿದ್ದೀವಿ ಎಂದು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ನಾವು ಸದರಿ ದಿನಚರಿಯನ್ನು ನಾನು **maintain** ಮಾಡುವುದಿಲ್ಲ ಎನ್ನುತ್ತಾರೆ. ಆರೋಪಿಯವರು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವ ವಿಷಯ ಚಾಸಾ-**1** ರವರಿಗೆ **6** ಗಂಟೆ ಸಮಯಕ್ಕೆ ಮಾಹಿತಿ ಬಂದಿರುತ್ತದೆ. ಪಂಚ ಸಾಕ್ಷಿಗಳನ್ನು ಪೋನ್ ಮಾಡಿ ಕರೆಸಿದ್ದಾರೆ ಎಂದು ಸಾಕ್ಷಿಯನ್ನು ನುಡಿದಿದ್ದೀರಾ ಇಬ್ಬರು ಸಾಕ್ಷಿಯಲ್ಲಿ ಯಾರನ್ನು ಪೋನ್ ಮಾಡಿ ಕರೆಸಿದ್ದೀರಾ ಎಂದರೆ ಸಾಕ್ಷಿ ಚಾಸಾ-**1** ರವರಿಗೆ ಗೊತ್ತು ಎನ್ನುತ್ತಾರೆ. ಶೆಟ್ಟಿಹಳ್ಳಿಯಲ್ಲಿ **300** ರಿಂದ **400** ಮನೆಗಳು ಇರುವ ಪ್ರದೇಶ ಎಂದರೆ ಸರಿ. ಶೆಟ್ಟಿಹಳ್ಳಿಯಲ್ಲಿ ದೇವಸ್ಥಾನ, ಹೋಟೆಲ್, ಮಿಲ್ಕ್ ಡೈರಿ ಇವೆ ಎಂದರೆ ಸರಿ. ನಿಪಿ-**1** ರಲ್ಲಿ **28** ಟೆಟ್ರಾ ಪ್ಯಾಕೇಟ್ ಗಳ ಮ್ಯಾನಿಪ್ಯಾಕ್ಚರಿಂಗ್ ಡೇಟ್, ಬ್ಯಾಚ್ ನಂಬರು ಮತ್ತು ಅದರ ಗುರುತು ಬಗ್ಗೆ ಬರೆದಿರುವುದಿಲ್ಲ. ನಿಪಿ-**1** ರಲ್ಲಿ **1450** ರೂ. ಯ ಡಿನಾಮಿನೇಷನ್ ಬಗ್ಗೆ ನಮೂದು ಮಾಡಿರುವುದಿಲ್ಲ. ಆರೋಪಿ ನಡೆಸುತ್ತಿರುವ ಅಂಗಡಿ ಬಾಗಿಲು ಉತ್ತರದ ಕಡೆ ಇತ್ತು. ಅದರ ಬಗ್ಗೆ ನಿಪಿ-**1** ರಲ್ಲಿ ನಮೂದು ಮಾಡಿರುವುದಿಲ್ಲ. ಅಂಗಡಿಯ ಬಗ್ಗೆ ಖುದ್ದು ಮಾಹಿತಿ ನನಗೆ ಇಲ್ಲ. ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳೀಳಿ ಸ್ಥಳಕ್ಕೆ ಹೋಗಿದ್ದೀನಿ ಮತ್ತು ಸ್ಥಳದಲ್ಲಿ **28** ಹೈವಾರ್ಡ ಟೆಟ್ರಾ ಪ್ಯಾಕೇಟ್ ಗಳು ಮತ್ತು **1450** ರೂ. ನ್ನು ಅಮಾನತ್ತು ಪಡಿಸಿಕೊಂಡಿದ್ದೀನಿ ಎಂದು ಸುಳ್ಳು ಹೇಳುತ್ತಿದ್ದೀನಿ ಎಂದರೆ ಸರಿಯಲ್ಲ. ನಿಪಿ-**1** ನ್ನು ಸ್ಥಳದಲ್ಲಿ ಬರೆದಿಲ್ಲ ಠಾಣೆಯಲ್ಲಿ ಬರೆದಿದ್ದೀವಿ ಮತ್ತು ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ

ಸುಳ್ಳು ಸಾಕ್ಷ್ಯವನ್ನು ನುಡಿತಾ ಇದ್ದೀನಿ ಎಂದರೆ ಸರಿಯಲ್ಲ. ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಅದೇ ರೀತಿ ಎಂಓ-**1** ನ್ನು ಸ್ಥಳದಲ್ಲಿ ಪಂಚರ ಸಮಕ್ಷಮ ಸೀಲು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.